International Journal of Kannada Research 2023; 9(1): 121-124




International Journal of Kannada Research
www.kannadajournal.com

ISSN: 2454–5813
IJKR 2023; 9(1): 121-124
© 2023 IJKR
www.kannadajournal.com
Received: 22-11-2022
Accepted: 25-12-2022

**ಡಾ. ಉಷಾದೇವಿ ಹಿರೇಮಠ**
ಸಹಾಯಕ ಪ್ರಾಧ್ಯಾಪಕರು,
ಮುಖ್ಯಸ್ಥರುಕನ್ನಡ ವಿಭಾಗ
ಎಸ್. ಬಿ. ಕಲಾ & ಕೆಸಿಪಿ ವಿಜ್ಞಾನ
ಮಹಾವಿದ್ಯಾಲಯ, ವಿಜಯಪುರ,
ಕರ್ನಾಟಕ, ಭಾರತ

**Corresponding Author:**
**ಡಾ. ಉಷಾದೇವಿ ಹಿರೇಮಠ**
ಸಹಾಯಕ ಪ್ರಾಧ್ಯಾಪಕರು,
ಮುಖ್ಯಸ್ಥರುಕನ್ನಡ ವಿಭಾಗ
ಎಸ್. ಬಿ. ಕಲಾ & ಕೆಸಿಪಿ ವಿಜ್ಞಾನ
ಮಹಾವಿದ್ಯಾಲಯ, ವಿಜಯಪುರ,
ಕರ್ನಾಟಕ, ಭಾರತ

# ಮಧ್ಯಮ ವರ್ಗದ ಮಹಿಳೆಯರ ತಲ್ಲಣಗಳು

**ಡಾ. ಉಷಾದೇವಿ ಹಿರೇಮಠ**

**ಪೀಠಿಕೆ**

"ನೀನು ಗಂಡು –ನಾನು ಹೆಣ್ಣು
ನೀನು ರೆಪ್ಪೆ –ನಾನು ಕಣ್ಣು
ನಮ್ಮಿಬ್ಬರ ಒಲುಮೆ ಗೆಲುಮೆ
ಜಗಕಾಯಿತು ಹುಣ್ಣಿಮೆ"

ಎನ್ನುವ ಡಾ. ಜಿ.ಎಸ್.ಶಿವರುದ್ರಪ್ಪನವರ ಕವಿತೆಯ ಈ ಸಾಲುಗಳಲ್ಲಿ ಸಹಜವಾಗಿಯೇ ಗಂಡು – ಹೆಣ್ಣಿನ ಸಮಗ್ರ ಒಲವಿನ ಶಕ್ತಿಯ ವಿಸ್ತಾರವಾದ ಆಳವಾದ ರೂಪಕವಿದೆ. ಈ ಪರಿಕಲ್ಪನೆಯು ಆದಿ ಕಾಲದಿಂದಲೂ ಹೆಣ್ಣು – ಗಂಡುಗಳು ಇಬ್ಬರು ಒಡನಾಡಿಗಳಾಗಿ ಒಂದೇ ಜೀವ, ಒಂದೇ ಭಾವದ ರೂಪ–ಪ್ರತಿರೂಪವಾಗಿ ಒಬ್ಬರಿಗೊಬ್ಬರು ದಿಕ್ಕಾಗಿ, ಬೆಳಕಾಗಿ ಬಾಳುವ ನಡೆಸಿ ಜೀವ ಸಂತತಿಗೆ ಸೆಲೆಯಾದವರು. ಗಂಡು ಮತ್ತು ಹೆಣ್ಣು ಎಂಬ ವಿಭಿನ್ನತೆ ಇರುವುದು ಅವರ ಶಾರೀರಿಕ ರಚನೆಯಲ್ಲಿ ಇಂದು ಹೆಣ್ಣು ಎನ್ನುವ Gender Identity ಆಚೆಯೂ'ಮಹಿಳೆ','ಸ್ತ್ರೀ'ಎಂಬ ಪದದಿಂದ ವಂದಿತಳಾಗಿದ್ದಾಳೆ.'ಹೆಣ್ಣು' ಎನ್ನುವಂತದ್ದು, ತುಂಬಾ ಪ್ರಾಚೀನ ಕಾಲದಿಂದಲೂ ಹುಟ್ಟಿನ ನೆಲೆಯಿಂದ ಗುರುತಿಸುವಂತದ್ದು. ಜೈವಿಕ ನೆಲೆಯನ್ನು ಬಳಸುವ ಪದ. ಇನ್ನು ಸಾಮಾಜಿಕ ಅಂತಸ್ತಿನ (Social Status) ಸ್ತರಗಳಲ್ಲಿ ಮಹಿಳಾ ಗುಂಪು, ಮಹಿಳಾ ಕಾರ್ಯಕರ್ತೆಯರು, ಮಹಿಳಾ ಸಾಧಕಿಯರು, ಮಹಿಳಾ ವಿಜ್ಞಾನಿಗಳು, ಮಹಿಳಾ ಸಾಹಿತಿಗಳು, ಮಹಿಳಾ ಕಲಾವಿದರು ಎಂದು ಬಳಕೆಯಾಗುತ್ತದೆ. ಹೀಗೆ ಮಹಿಳೆ ಎನ್ನುವ ಪದ ಇಂದು ಸಮಾಜದ ಮುಖ್ಯವಾಹಿನಿಯಲ್ಲಿ ಹೆಚ್ಚು ಬಳಸಲ್ಪಡುತ್ತಿದೆ.
ಹೆಣ್ತನ,ಮುಟ್ಟು, ಬಸಿರು, ಹೆರಿಗೆ, ಬಾಣಂತಿತನ ಇವುಗಳ ಪ್ರಕ್ರಿಯೆ, ಜವಾಬ್ದಾರಿಗಳನ್ನು ತೊಡಗಿಸಿಕೊಳ್ಳುವ ಹೆಣ್ಣು, ಈ ತೊಳಲಾಟಗಳ ಮದ್ಯೆಯೂ ತನ್ನೊಳಗಿನ ಅಂತಃಶಕ್ತಿಯನ್ನು ಜಾಗೃತಗೊಳಿಸಿ, ಮುನ್ನುಗ್ಗುವ ರೀತಿಯೇ 'ಮಹಿಳೆ' ಎನ್ನುವ ಪದದಲ್ಲಿ ಸಾರ್ಥಕವಾಗಿದೆ.ಈ ಮಹಿಳೆಯ ಸಾಧಕ ಬದುಕಿನ ಹೆಜ್ಜೆ ಗುರುತುಗಳನ್ನು, ಅವಳ ತಲ್ಲಣಗಳನ್ನು, ಮರೆಯುವಂತಿಲ್ಲ. 'ತಲ್ಲಣ' ಈ ಪದಕ್ಕೆ ಕಳವಳ, ಕ್ಷೋಭೆ, ಆಂದೋಲನ, ವಿಪ್ಲವ, ವ್ಯಗ್ರ, ತಹತಹ, ಮನಸ್ಸಿನ ಬೇಗುದಿ ಇತ್ಯಾದಿ ಪದಗಳು ಸಮನಾರ್ಥಕ ಪದಗಳಾಗಿ ಬರುತ್ತವೆ.ಆದಿಕಾಲದಿಂದ ಇಂದಿನ ಈ ಕ್ಷಣದವರೆಗೂ ಅವಳ ಸುಧೀರ್ಘ ಬದುಕಿನ ಏಳು–ಬೀಳುಗಳು, ದ್ವಂದ್ವಗಳು, ಅವಮಾನ, ಅನುಕಂಪ, ನೋವು–ಸಾವು ಇವುಗಳ ಮದ್ಯೆಯೇ ಒಂದು ಮಹಾನ್ ಶಕ್ತಿಯಾಗಿ ಮೂಡಿಬರುವಳು. ವಿಧೇಯತೆಯಿಂದ ದುಡಿಯುವ ತಾಯ್ತನದಲ್ಲಿಯೂ ವಾತ್ಸಲ್ಯ ಕೊಟ್ಟಿದ್ದಾಳೆ. ಕುಟುಂಬದ ಒಳಿತಿಗಾಗಿ ದುಡಿದಿದ್ದಾಳೆ, ನಕ್ಕಿದ್ದಾಳೆ, ಮನೆಯಂಗಳದಲ್ಲಿ ರಂಗೋಲಿ ಬಿಡಿಸುತ್ತಲೇ ತನ್ನ ಬದುಕನ್ನು ಮಂಗಳಗೊಳಿಸಿದ್ದಾಳೆ.ತಾನಿಲ್ಲದೆ ಪುರುಷನಿಲ್ಲ, ಪುರುಷನಿಲ್ಲದೆ ತಾನಿಲ್ಲ ಎಂಬುದನ್ನು ತೋರಿಸಿದ್ದಾಳೆ.
ಕೆ. ಶರೀಫಾ ಮುಸ್ಲಿಂ ಸಂವೇದನೆಯ ಸ್ತ್ರೀ ಪರ ನಿಲುವಿನ ಬಂಡಾಯ ಕವಯತ್ರಿ ಅವರ 'ನಾಬಿಕೇಂದ್ರದಿಂದ ಜೀವಕೇಂದ್ರದವರೆಗೆ' ಕವಿತೆಯಲ್ಲಿ ಬಹಳ ಸ್ಪಷ್ಟವಾಗಿ ಹೇಳುತ್ತಾರೆ.

"ಅಮ್ಮ ಮೈಲಿಗೆಯಲ್ಲ ಪೊರೆವ ತೊಟ್ಟಿಲು
ಜೀವಸೃಷ್ಟಿಯ ಮೂಲದಾತು ಒಡಲ ತಂಪು

ಅನಂತಕಾಲದಿಂದ ಸಾಗಿಬಂದ ಜೀವಜಾಲ
ಹುಟ್ಟಿನ ಘನತೆಯನ್ನು ಮೈಲಿಗೆ ಮಾಡಿದರು".

ಹೆಣ್ಣು ಅಂದರೆ ಅಪವಿತ್ರ-ಮೈಲಿಗೆ ಎಂದೇ ಭಾವಿಸಿಕೊಳ್ಳುತ್ತಲೇ ಮತ್ತೊಮ್ಮೆ ದೈವತ್ವದ ಹುಸಿ ಸ್ಥಾನವನ್ನು ಕೊಡುವ ಈ ಸಾಂಪ್ರದಾಯಿಕ ಶಿಷ್ಟಾಚಾರಗಳ ಮೌಲ್ಯದಾಯಿತ್ವ ಕುರಿತು ಪ್ರಶ್ನಿಸುತ್ತಾರೆ. ತನ್ನನ್ನು ಹೆತ್ತು ಹೊತ್ತು, ಪೋಷಿಸಿ, ಬೆಳೆಸುವ ಸ್ತ್ರೀತ್ವವನ್ನು ಅಗೌರವಿಸಿ, ನಿಂದಿಸಿ, ವಿಜೃಂಭಿಸುವ ದೌರ್ಜನ್ಯಗಳಿಗೆ ಈ ಕವಿತೆ ತೀವ್ರವಾಗಿ ಪ್ರತಿಕ್ರಿಯಿಸುತ್ತದೆ. ಹೀಗೆ ಹೆಣ್ಣುsecondary(ದ್ವಿತೀಯ ದರ್ಜೆ)ಯಾಗಿ, ಪುರುಷ primary ಯಾಗಿ ಇರುವಂತಹ ಪುರುಷ ಸ್ಥಾಪಿತ ಮೌಲ್ಯದಲ್ಲಿ ಬದಲಾವಣೆ ಅಗತ್ಯವಾಗಿದೆ. ಈ ಅರ್ಥದಲ್ಲಿ ಮಹಿಳಾ ಲೇಖಕಿಯರ ಎಲ್ಲ ಬರಹಗಳು (ವೈದೇಹಿ, ಗೀತಾ ನಾಗಭೂಷಣ, ಮಾಲತಿ ಪಟ್ಟಣಶೆಟ್ಟಿ, ವೀಣಾ ಶಾಂತೇಶ್ವರ ಇನ್ನೂ ಮುಂತಾದ) ಈ ತಲ್ಲಣಗಳನ್ನು ಪ್ರತಿನಿಧಿಸುತ್ತವೆ.

ಶತ-ಶತಮಾನಗಳಿಂದ ಸಮಾಜದ ಸಾಂಸ್ಕೃತಿಕ ವ್ಯವಸ್ಥೆಗೆ ತಕ್ಕಂತೆ ಅವಳ ಸ್ಥಾನಮಾನಗಳನ್ನು ನಿಗದಿಪಡಿಸಿರುವುದನ್ನು ಅಲ್ಲಗಳೆಯುವಂತಿಲ್ಲ.ನಿರ್ದಿಷ್ಟದ ಕರ್ತವ್ಯಗಳ ಈಡೇರಿಕೆಯಲ್ಲಿ ಅವಳ ತಲ್ಲಣಗಳು ಒಂದಲ್ಲ ಎರಡಲ್ಲ ಅನೇಕಾನೇಕ. ಇಂದು ಆಧುನಿಕತೆ, ವಿಜ್ಞಾನ, ತಂತ್ರಜ್ಞಾನದ ಆವಿಷ್ಕಾರ, ಸಾಧನೆಗಳ ಭರಾಟೆಯ ಉನ್ನತ ಸಾಧನೆಯಲ್ಲಿದ್ದಾಗಲೂ ಮಹಿಳೆಯರ ಪರಿಸ್ಥಿತಿ ಅಷ್ಟು ಸುಕ್ಷೇಮವಾಗಿಲ್ಲ. ಸಂಪ್ರದಾಯ, ಮಡಿವಂತಿಕೆಯ ಸೆರಗಿನಲ್ಲಿಯೇ ಬದುಕನ್ನು ಅರಳಿಸಿಕೊಳ್ಳುವ ಅವಳ ಸ್ಥಿತಿ ಬಿಸಿ ಬಾಣಲೆಯಂತಾಗಿದೆ. ಸಾಂಪ್ರದಾಯಿಕ, ಊಳಿಗಮಾನ್ಯ ಚಿಂತನೆಗಳು ಮೇಲುಗೈ ಆಗಿರುವಾಗ, ವರ್ಗ, ಪ್ರಾಂತೀಯ, ಜನಾಂಗೀಯ, ಹೀಗೆ ಅನೇಕ ಅಸಮಾನತೆಗಳು, ಭೇದ-ಭಾವಗಳು, ತಾತ್ಸಾರಗಳು, ಅವಳನ್ನು ನಲುಗಿಸಿವೆ.

ಜನಸಂಖ್ಯೆಯ ಅರ್ಧದಷ್ಟಿರುವ ಮಹಿಳೆಯರು ದ್ವಿತೀಯ ದರ್ಜೆಯ ಪ್ರಜೆಗಳಾಗಿ ಬದುಕುತ್ತಿರುವುದೇ ಹೆಚ್ಚು. ಪೂರ್ವದ ಸಂಸ್ಕೃತಿಯಲ್ಲಿ ಬರೀ ಒಳಮನೆಯ ಗೃಹಿಣಿಯಾಗಿ ಪಾತ್ರ ನಿರ್ವಹಿಸುವ ಹೆಣ್ಣು ಇಂದು ಒಳಗು- ಹೊರಗೂ ದುಡಿಯುವ ಸಮರ್ಥ ಮಹಿಳೆಯಾಗಿದ್ದಾಳೆ. ಮದ್ಯಮ ವರ್ಗದ ಮಹಿಳೆಯರ ವಿಚಾರಕ್ಕೆ ಬಂದಾಗ, ತನ್ನ ವ್ಯಕ್ತಿತ್ವ, ವೃತ್ತಿಪರತೆಯನ್ನು ನಿಭಾಯಿಸುತ್ತ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳುವಲ್ಲಿ ಅವಳು ಹೆಣಗಾಡುವ ಪರಿ ಅನನ್ಯವಾದುದು. ಇನ್ನು ಅಸಂಘಟಿತ ವಲಯದ ಮಹಿಳೆಯರು ತಮ್ಮ ಕೆಲಸವನ್ನು ಸ್ಥಿರವಾಗಿ ಇಟ್ಟುಕೊಳ್ಳಲು ಹೋರಾಡುತ್ತಾ ವೇತನದ ತಾರತಮ್ಯವನ್ನು ಅನುಭವಿಸುತ್ತ ದುಡಿದು ತಿನ್ನುವುದಕ್ಕೆ ಅಣಿಯಾಗಿಬಿಡುತ್ತಾರೆ. ಮಾರುಕಟ್ಟೆಯ ಜಗತ್ತು ಊರನ್ನು ಭೂಮಿಯನ್ನು ಕೆಲಸವನ್ನು ಒತ್ತುವರಿ ಮಾಡಿಕೊಂಡು ಹಳ್ಳಿ ಹೆಣ್ಣುಗಳನ್ನು ನಗರದ ಸಂಸ್ಕೃತಿಗೆ ತಂದು ಬಿಟ್ಟಿದೆ. ಅಲ್ಲಿ ಈ ಹೆಣ್ಣುಗಳು ದುಡಿಮೆಗಾರರಾಗಿ ನಿರೂಪಿಸಿಕೊಳ್ಳುತ್ತ, ಹೊಸ ಸಾಂಸ್ಕೃತಿಕ ಪರಿಸರಕ್ಕೆ ಭಾಷೆ-ಬಟ್ಟೆಗಳನ್ನು ಅನುಕರಿಸುತ್ತಾ ಹೊಸಹೊಸ ಮನ್ವಂತರಗಳಿಗೆ ಒಪ್ಪಿಕೊಳ್ಳುವ ಅನಿವಾರ್ಯತೆಗೆ ಒಡ್ಡಿಕೊಳ್ಳುತ್ತಾರೆ. ಹೊಸ ಹೊಸ ಸವಾಲುಗಳಿಗೆ ಎದುರಾಗುತ್ತಾಳೆ. ಹೊಟ್ಟೆ ತುಂಬಿಸಿಕೊಳ್ಳುವ ಕೌಶಲ್ಯಕ್ಕೆ ತೆರೆದುಕೊಳ್ಳುತ್ತಾ ಸಾಗುತ್ತಾಳೆ. ಇನ್ನು ನೈಸರ್ಗಿಕ ವಿಕೋಪಗಳಂಥ ಸಂದರ್ಭದಲ್ಲಿ ಗಂಡ-ಮಕ್ಕಳನ್ನು ಕಳೆದುಕೊಂಡುಅನಾಥಳಾಗಿ ಅನುಭವಿಸುವ ಅವಳ ತಲ್ಲಣದ ಪರಿ ಹೇಳತೀರದು. ಒಟ್ಟಾರೆಯಾಗಿ ಇವರೆಲ್ಲರ ಬದುಕು ನಿರಂತರ ದಮನಕ್ಕೆ ಒಳಗಾಗುತ್ತಲೆ ಇರುತ್ತದೆ.

ಬೆಳಗಾಗಿ ನಾನೆದ್ದು! ಯಾರ್ಯಾರ ನೆನೆಯಲಿ! ಎಳ್ಳು ಜೀರಿಗೆ ಬೆಳೆಯೋಳ ಭೂತಾಯಿ ಎದ್ದೊಂದು ಗಳಿಗೆ ನೆನೆದೇನ ಎಂದು ಭೂಮಿತಾಯಿಯನ್ನು ವಂದಿಸಿಯೇ ಕೃಷಿ ಕೆಲಸ ಮಾಡುವ ನಮ್ಮ ಗ್ರಾಮೀಣ ಮಹಿಳೆಯರು ಅನುಭವಿಸುವ ತಲ್ಲಣವನ್ನು ಪಿ. ಲಂಕೇಶ ಅವರ "ಅವ್ವ" ಕವಿತೆ ಮತ್ತೇ-ಮತ್ತೇ ಚಿಂತನೆಗೆ ಈಡು ಮಾಡುತ್ತದೆ.

"ನನ್ನವ್ವ ಬದುಕಿದ್ದು,
ಕಾಳು ಕಟ್ಟಿಗೆ, ದುಡಿತಕ್ಕೆ, ಮಕ್ಕಳಿಗೆ,
ಮೇಲೊಂದು ಸೂರು,
ಅನ್ನ ರೊಟ್ಟಿ ಹಚಡಕ್ಕೆ,
ಸರೀಕರ ಎದುರು ತಲೆಯತ್ತಿ ನಡೆಯಲಿಕ್ಕೆ"

ಇದು ಪ್ರತಿ ಹೆಣ್ಣಿನ ಒಡಲ ಕನವರಿಕೆ, ಕಷ್ಟ ನೋವಿನ ಧ್ವನಿಗಳನ್ನು ಗುರುತಿಸಿ ನೊಂದವರ ಬಾಳನ್ನು ಈ ಕವಿತೆ ರೈತಾಪಿ ಮಧ್ಯಮ ವರ್ಗದ ರೈತಾಪಿ ಹೆಣ್ಣಿನ ಬದುಕನ್ನು ಅನಾವರಣ ಮಾಡುತ್ತದೆ.

ಇವತ್ತು ಹೆಣ್ಣು ತನ್ನ ಬೌತಿಕ ಐಡೆಂಟಿಟಿಯನ್ನು ದಾಟಿ ವ್ಯಕ್ತಿತ್ವ ರೂಪಿಸಿಕೊಳ್ಳುವತ್ತ ತುಡಿಯುತ್ತಿದ್ದಾಳೆ. ಆದರೆ ಹೀಗೆ ಸಾಗುವ ಹೆಣ್ಣುಗಳಲ್ಲಿ ಎಲ್ಲರೂ ಒಂದೇರೀತಿಯ ಹಿನ್ನೆಲೆ ಹೊಂದಿರುವುದಿಲ್ಲ. ಅನೇಕ ಸಂದರ್ಭದಲ್ಲಿ ಅವಳು ಅನುಭವಿಸುವ ತಲ್ಲಣಗಳು ಅನೇಕ ರೀತಿಯಲ್ಲಿರುತ್ತವೆ. ಇವೆಲ್ಲವೂ ಪುರುಷ ಹಿತಾಸಕ್ತಿಯಲ್ಲಿಯೇ ಕಾರ್ಯ ನಿರ್ವಹಿಸುತ್ತವೆ. ಬ್ರೂಣಹತ್ಯೆ, ಶಿಶುಮರಣ, ವರದಕ್ಷಿಣೆಸಾವು, ಅತ್ಯಾಚಾರ, ಅನಕ್ಷರತೆ ಈ ಎಲ್ಲ ಸಮಸ್ಯೆಗಳು ಗ್ರಾಮೀಣ ಹೆಣ್ಣನ್ನು ನಲುಗಿಸಿವೆ.

ಇವುಗಳ ಪರಿಣಾಮವಾಗಿ ಮಹಿಳೆಯರು ಪ್ರತಿಕ್ಷಣವೂ ಆತಂಕ & ಭಯ, ಅಭದ್ರತೆಗಳ ನಡುವೆ ಗೋಳಾಡುವಂತೆ ಪರಿಸ್ತಿತಿ ನಿರ್ಮಾಣವಾಗಿದೆ. ಒಂದು ಕಡೆ ಸಾಮಾನ್ಯ ಜೀವನವನ್ನು ನಡೆಸಲಾರದೆ ಬದುಕನ್ನು ನಿರ್ವಹಿಸಲಾಗದೆ ಮುಂದುವರೆದು ರಸ್ತೆ ಬೀದಿಗಳಲ್ಲಿ ಒಬ್ಬಂಟಿಯಾಗಿ ತಿರುಗಲಾರದ ಅಸಹಾಯಕತೆಯಲ್ಲಿದ್ದಾಳೆ. ಇದರಿಂದ ನಿರಂತರವಾಗಿ, ಶೋಷಣೆ, ದೌರ್ಜನ್ಯಕ್ಕೊಳಗಾಗಿ ಮಾನಸಿಕ ಮತ್ತು ದೈಹಿಕ ಸದೃಢತೆಯನ್ನು, ಸ್ವಾಸ್ಥ್ಯವನ್ನು ಕಳೆದುಕೊಂಡು ಖಿನ್ನತೆಯನ್ನು ಅನುಭವಿಸುತ್ತಿದ್ದಾಳೆ.

ಇನ್ನು ಉನ್ನತ ವಲಯದಲ್ಲಿ, ಪುರುಷ ಅಧಿಪತ್ಯದಲ್ಲಿ ಸೇವೆ ಸಲ್ಲಿಸುವಾಗ, ಹುಸಿ ಕಾಳಜಿ, ಕೃತಕ ಗೌರವ ಸೋಗಲಾಡಿತನಗಳೇ ಹೆಚ್ಚಾಗಿ ಕಾಣುತ್ತವೆ. ಸಾಮಾಜಿಕ ಉತ್ಪಾಧನೆಯಲ್ಲಿ ಸ್ತ್ರೀಯ ಪಾತ್ರ ಅರ್ಧಕ್ಕಿಂತ ಹೆಚ್ಚು ಇದ್ದಾಗಲೂ ಸಂಬಳ ಗೌರವಧನ ಪುರುಷರಿಗಿಂತಲೂ ಕಡಿಮೆಯೇ ಇರುತ್ತದೆ.ಕೆಲವೊಂದು ಸಂದರ್ಭಗಳಲ್ಲಿ ಸೌಂದರ್ಯವೇ ಅವಳ ವ್ಯಕ್ತಿತ್ವ ವಿಕಸನಸಕ್ಕೆ ಮಾರಕವಾಗುತ್ತದೆ.ಸಂಘಟಿತ & ಅಸಂಘಟಿತ ವಲಯಗಳಲ್ಲಿ ಇದರಿಂದ ಸಾಂಸ್ಕೃತಿಕ ಅಧಃಪತನಕ್ಕೆ ಕಾರಣವೂ ಆಗುತ್ತದೆ.ಆ ಸಂದರ್ಭದ ತೊಂದರೆಗೆ ಎದುರುತ್ತರ ಕೊಟ್ಟರೂ ಮತ್ತೊಮ್ಮೆ ಆ ಬೀದಿಯಲ್ಲಿ ಬರಲು ಭಯ ಕಾಡುತ್ತದೆ.ಇನ್ನು ಮುಖ್ಯವಾಗಿ ಅಭದ್ರತೆಯಿಂದ ಮಹಿಳೆ ಬಹಳಷ್ಟು ಗಾಬರಿಯಾಗಿದ್ದಾಳೆ. ಇಂದು ಶಿಕ್ಷಣಕ್ಕೆ ಹೆಚ್ಚು ಆದ್ಯತೆ ಕೊಟ್ಟಿರುವುದರಿಂದ. ತಂದೆಯ ಮನೆಯಲ್ಲಿ ಹೆಚ್ಚು ಓದುವ ಹೆಣ್ಣು ಮಕ್ಕಳು ಮುಂದೆ ಈ ಅವಕಾಶ ಸಿಗುತ್ತದೆಯೋ ಇಲ್ಲವೋ ಎಂಬ ಕಾರಣದಿಂದ, ಇನ್ನು ವೃತ್ತಿ ನಿರ್ವಹಿಸುವ ಸ್ಥಳದಲ್ಲಿ ವೇಳೆಗೆ ಸರಿಯಾಗಿ ಹೋಗದೆ ಇದ್ದರೆ ಕೆಲಸದಿಂದ ತೆಗೆದು ಬಿಟ್ಟರೆ, ಅರ್ಧಗಂಟೆ ತಡವಾದರೆ ಅರ್ಧ ಸಂಬಳ ಕೊಟ್ಟರೆ ಎಂಬ ತಲ್ಲಣಗಳಿಂದ ಹೊರಬರಲಾಗುತ್ತಿಲ್ಲ.ಒಟ್ಟು ವ್ಯವಸ್ಥೆಯ ಹಿಡಿತದಲ್ಲಿ ಬಂದರೆ ಅವಳ ತಲ್ಲಣಗಳು ಅನೇಕಾನೇಕ. ಇಂತಹ ಸನ್ನಿವೇಶಗಳಲ್ಲಿ ಹೆಚ್ಚು ಮಾತನಾಡದೇ ಮೌನಿಯಾಗುತ್ತಾಳೆ.

ಕೌಟುಂಬಿಕ ವಲಯದಲ್ಲಿ ಸಾಕಷ್ಟು ಹಿಂಸೆಯನ್ನು ಅನುಭವಿಸುತ್ತಿರುತ್ತಾರೆ. ಈ ಸಂದರ್ಭದಲ್ಲಿ ಮಾತನಾಡಲು

ಅನಿಸಿದ್ದನ್ನು ಹೇಳುವ ಸ್ವಾತಂತ್ರ್ಯ ಇಲ್ಲದೆ ನಲುಗುತ್ತಾಳೆ. 'ಬೇಲಿಯೇ ಎದ್ದು ಹೊಲ ಮೇಯ್ದಂತೆ' ಎಂಬಂತಾದರೆ ತನ್ನ ನೋವುಗಳಿಗೆ ಭಾಷೆಯ ಅಭಿವ್ಯಕ್ತಿಯನ್ನು ಕೊಡುವದಿಲ್ಲ.ಇನ್ನು ಮಕ್ಕಳಾಗದಿದ್ದರಂತೂ ತುಂಬಾ ಅಸಹನೀಯ ದುಃಖವನ್ನುಅನುಭವಿಸುತ್ತಾಳೆ.

'ಬಾಲಕರಿಲ್ಲದ ಬಾಲಿದ್ಯಾತರ ಜನ್ಮ
ಬಾಡೀಗೆ ಎತ್ತು ದುಡಿದಾಂಗ । ಬಾಳೆಲೆಯ
ಹಾಸ್ಯುಂಡು ಬೀಸಿ ಒಗೆದಂಗ"

ಈ ರೀತಿಯ ಪರಿಸ್ಥಿತಿ ಅವಳದಾಗಿರುತ್ತದೆ ಮಕ್ಕಳಿಲ್ಲದೆ ಹೋದರೆ ತನ್ನನ್ನು ಸಲಹುವವರು ಯಾರೂ ಇಲ್ಲದೆ ನನ್ನ ಸ್ಥಾನವನ್ನು ಯಾರಾದರೂ ಕಿತ್ತುಕೊಳ್ಳಬಹುದು ಎಂದು ತಲ್ಲಣಕ್ಕೊಳಗಾಗುತ್ತಾಳೆ.ಬಡತನ ಎದುರಿಸುತ್ತಿರುವ ಅನೇಕ ಮದ್ಯಮ ವರ್ಗದ ಕುಟುಂಬಗಳಲ್ಲಿ ನಿಗದಿತ ವಯಸ್ಸಿಗೆ ಮದುವೆಯಾಗದೆ ಅವಿವಾಹಿತರಾಗಿಯೇ ಉಳಿಯುತ್ತಾರೆ. ವರದಕ್ಷಿಣೆ, ಸುಂದರವಾಗಿ ಇಲ್ಲದೇ ಇರುವುದು ಇವುಗಳೆಲ್ಲಾ ಕಾರಣವಾಗುತ್ತವೆ. ಇದರ ಪರಿಣಾಮವಾಗಿ ಅವಳಲ್ಲಿ ಮಾನಸಿಕ ಖಿನ್ನತೆ ಆವರಿಸುತ್ತದೆ.ಬೀಡಿ ಕಟ್ಟುವ ಹಾಗೂ ಮಾರುವ ಹೆಣ್ಣುಮಕ್ಕಳಲ್ಲಿ ಇದರ ಪರಿಣಾಮ ಹೆಚ್ಚು, ಜೊತೆಗೆ ಶ್ರೀಮಂತ ಜೀವನ ಶೈಲಿಗೆ ಎಷ್ಟೋ ಹೆಣ್ಣುಮಕ್ಕಳು ಬೇಗನೇ ಆಕರ್ಷಿತರಾಗಿ ತಮ್ಮ ಬದುಕಲ್ಲಿ ಇರುವುದನ್ನು ಪ್ರೀತಿಸದೇ ಕೊರಗುವಂತದ್ದು, ಬೇಗನೆ ಶ್ರೀಮಂತರಾಗಬೇಕೆಂಬ ಆಸೆಗೆ ಅಧಿಕ ಲಾಭದ ಆಸೆಗೆ ಬಿದ್ದು, "ಉಳುವ ಭೂಮಿಯನ್ನು ಬಿಟ್ಟು ಕೆಟ್ಟು ಪಟ್ಟಣ ಸೇರು ಎಂಬಂತೆ" ನಗರದ ಆಚೆಗೆ ಬಂದು ನಿಂತಿದ್ದಾರೆ. ಇನ್ನು ಕುಟುಂಬದಲ್ಲಿ ದುಡಿದು ಹಾಕುವ ಗಂಡ ಅಥವಾ ಮಗ ಅಪಘಾತದಲ್ಲಿ ಅಥವಾ ಸಾಲಬಾಧೆಯಿಂದ ಅಕಾಲಿಕ ಮರಣ ಹೊಂದಿದಾಗ ಇಂತಹ ಸಂದರ್ಭದಲ್ಲಿ ಹೆಣ್ಣು ಒಬ್ಬಂಟಿಯಾಗಿ ಹೋರಾಟ ಮಾಡಬೇಕಾಗುತ್ತದೆ.ಇವುಗಳಿಗೆ ಪರಿಹಾರ ಪಡೆಯುವಾಗ ಅವಳು ಅನುಭವಿಸುವ ಹಿಂಸೆ, ಅವಮಾನಗಳು, ಅಷ್ಟಿಷ್ಟಲ್ಲ. ಅನುಕಂಪ, ದಯೆಗಳ ಮಹಾಪೂರವೆ ಅಲ್ಲಿ ಹರಿಯುತ್ತದೆ. ಪತಿ ಸೈನ್ಯದಲ್ಲಿದ್ದರೆ, ವಿದೇಶದಲ್ಲಿದ್ದರೆ, ಕುಟುಂಬ ಜವಾಬ್ದಾರಿಯನ್ನು ಹೊರುವ ಇವಳು ಒಮ್ಮೊಮ್ಮೆ ಚಾರಿತ್ರ್ಯವಧೆಗೂ ಒಳಗಾಗುವಳು.

ಇನ್ನು ಕಾರ್ಪೊರೇಟ್ ಜಗತ್ತಿನ ಅನುಭೋಗಿ ಸಂಸ್ಕೃತಿಯು ಮದ್ಯಮ ವರ್ಗದ ಮಹಿಳೆಯರನ್ನು ಸಾಕಷ್ಟು ಆಕರ್ಷಿಸಿವೆ. ಹುಸಿ ಸೌಂದರ್ಯ ಪ್ರಜ್ಞೆ, ಅರೆ–ಬರೆ ಬಟ್ಟೆ ಪ್ರದರ್ಶನ, ಆಭರಣ, ಪ್ರಸಾಧನಗಳು, ಕೃತ್ರಿಮತೆಯ ಜಾಲದೊಳಗೆ ಬೇಗನೆ ಬೀಳುವಂತೆ ಮಾಡುತ್ತವೆ. ಈಕಾರ್ಪೊರೇಟ್ ವಲಯವು ಮಹಿಳೆಯರನ್ನು ಮಾರುಕಟ್ಟೆಯ ಸರಕುಗಳನ್ನಾಗಿಸಿ ತಾವು ಹೆಚ್ಚುಲಾಭ ಪಡೆಯುವಲ್ಲಿ ಯಶಸ್ವಿಯಾಗಿವೆ. ಇವು ಹೆಚ್ಚು ನಗರ ಕೇಂದ್ರಿತ ಮದ್ಯಮ ವರ್ಗದ ಮಹಿಳೆಯರನ್ನು ಸೆಳೆದಿಟ್ಟಿವೆ.ಆರ್ಥಿಕ ಪರಿಸ್ಥಿತಿಯನ್ನು ನಿಭಾಯಿಸಲು ಒಮ್ಮೊಮ್ಮೆ ತಾನೇ ಮೋಸ ಹೋಗುವಳು ಹನಿಟ್ರ್ಯಾಪ್‌ಗಳಂತಹ ಜಾಲಕ್ಕೆ ಸಿಕ್ಕಿಕೊಳ್ಳುವುದು, ಇನ್ನು ಅತ್ಯಾಚಾರದ ಪ್ರಕರಣಗಳಲ್ಲಿ ವಿಚಾರಣೆ ನಡೆಸುವ ಸಂದರ್ಭದಲ್ಲಿ ವೈದ್ಯಕೀಯ ಪರೀಕ್ಷೆಗಳನ್ನು ಎದುರಿಸುವಾಗ ಶಸ್ತ್ರ ಕ್ರಿಯೆಗಳಿಗೆ ಒಳಗಾಗುವಾಗ ಸಾಕಷ್ಟು ಹಿಂಸೆ ಪಡುತ್ತಾಳೆ. ಇನ್ನು ಜಾಹೀರಾತುಗಳಲ್ಲಿ ಹೆಣ್ಣಿನ ಅಂಗಾಂಗಗಳನ್ನು ಪ್ರದರ್ಶಿಸಿ ಲಾಭ ಪಡೆಯುವುದು. ಇನ್ನು ತನ್ನವರೆಂದು ನಂಬಿ ಅವರ ಮುಂದೆ ತನ್ನ ನೋವನ್ನು ಹಂಚಿಕೊಂಡಾಗ ಅದನ್ನು ಅವಳ ಅಸಹಾಯಕತೆ ಎಂದು ತಿಳಿದು, ಸಹಾಯದ ನೆಪದಲ್ಲಿ ತಮ್ಮ ಸ್ವಾರ್ಥವನ್ನು ತೀರಿಸಿಕೊಳ್ಳುವುದು.ಇತ್ತೀಚಿನ ಆಧುನಿಕ ತಂತ್ರಜ್ಞಾನದ ಜಗತ್ತಿನಲ್ಲಿ ಮಹಿಳೆಯರನ್ನು ಸೈಬರ್ ಕ್ರೈಂ ಗುರಿಯಾಗಿಸಿ ತಮ್ಮ ವಿಷಯಗಳನ್ನು ಸೋಶಿಯಲ್ ಮೀಡಿಯಾಗಳಲ್ಲಿ ಹಂಚುವುದರಿಂದ, ಮಾಹಿತಿಗಳ ಸೋರಿಕೆಯಾಗಿ ನಷ್ಟವನ್ನು ಅನುಭವಿಸುತ್ತಾರೆ. ಯುವತಿಯರು ಸಾಮಾಜಿಕ ಜಾಲತಾಣಗಳಿಂದ ಮೋಸ ಹೋಗುತ್ತಿದ್ದಾರೆ. ಹೀಗೆ ಹೆಣ್ಣಿನ ತಲ್ಲಣಗಳು ಇವತ್ತಿನ ವಿದ್ಯಾವಂತರು – ಅನಕ್ಷರಸ್ತರು ಎಂಬ ಭೇದವಿಲ್ಲದೆ ಅವಳನ್ನು ನಲುಗಿಸಿವೆ.

ಮದ್ಯಮ ವರ್ಗದ ಹೆಣ್ಣು ಮಕ್ಕಳು ಅನೇಕ ಸಮಸ್ಯೆಗಳಿಂದ ಬಳಲುತ್ತಿದ್ದಾರೆ. ತನ್ನ ಉದ್ಯೋಗ ಮತ್ತು ಕುಟುಂಬ ನಿಭಾಯಿಸುವ ಕರ್ತವ್ಯದಲ್ಲಿ ಅನೇಕ ಒತ್ತಡಗಳಿಂದಾಗಿ ಕುಸಿದು ಹೋಗುತ್ತಾಳೆ.ಇಲ್ಲಿ ಓದಿರುವವರು–ಓದದೇ ಇರುವವರು, ಹಳ್ಳಿ–ನಗರ ಎಂಬ ಭೇದ–ಭಾವ ಇಲ್ಲದೆ ಅನಾರೋಗ್ಯದಿಂದ ಜೀವನ ಸಾಗಿಸುತ್ತಿದ್ದಾರೆ. ಹಾರ್ಮೋನುಗಳ ಏರು–ಪೇರು, ರಕ್ತಹೀನತೆ, ಸೊಂಟ, ಕುತ್ತಿಗೆ ನೋವು, ಮೂತ್ರ ಪಿಂಡದ ಸಮಸ್ಯೆ, ಮೂಳೆ ಸಂದುಗಳ ನೋವು ಇತ್ಯಾದಿ ಎಂದ ಕೂಡಲೆ ಹೆಣ್ಣಿನ ಜೀವನ ಮುಗೀತು ಎನ್ನುವಂತೆಯೆ ವರ್ತಿಸುತ್ತಾರೆ. ಗರ್ಭಾಶಯದಲ್ಲಿ ಗಡ್ಡೆಗಳು ಕಾಣಿಸಿಕೊಂಡರೆ ಹೆಣ್ತನ ಕಳೆದುಕೊಂಡಿದ್ದಾಳೆ ಎಂದೇ ಭಾವಿಸಿಬಿಡುತ್ತಾರೆ. ಆರ್ಥಿಕ ಸಬಲೀಕರಣ ಉದ್ಯೋಗ, ಕರ್ತವ್ಯಗಳ,ಭರಾಟೆಯಲ್ಲಿ ಆರೋಗ್ಯವನ್ನು ಕಡೆಗಣಿಸಿದರೆ ಹೆಣ್ಣಿನ ಬದುಕು, ಒಟ್ಟಾರೆ ಜೀವನದ ಮೇಲೆ ಪರಿಣಾಮ ಬೀರುತ್ತದೆ.

ಬದುಕಿನ ಮುಸ್ಸಂಜೆಯ ಸ್ಥಿತಿಯಲ್ಲಿರುವ ಹೆಣ್ಣುಮಕ್ಕಳ ತಲ್ಲಣವೇ ವಿಭಿನ್ನ. ಮುಪ್ಪಿನ ಕಾಲದಲ್ಲಿ ಅವಳನ್ನು ನೋಡಿಕೊಳ್ಳಲಾಗದೆ ವೃದ್ಧಾಶ್ರಮಕ್ಕೆ ಕಳಿಸುವ ಉದಾಹರಣೆಗಳು ಸಾಕಷ್ಟಿವೆ. ಇದಲ್ಲದೆ ಮಕ್ಕಳು ತಾಯಿಯನ್ನು ನಿರ್ದಿಷ್ಟ ಸಮಯದವರೆಗೆ ಹಂಚಿಕೊಳ್ಳುವ ಪರಿಪಾಠವು ಅವಳ ದುರ್ದೈವವೇ ಸರಿ. ನಮ್ಮ ರಾಮಾಯಣ, ಮಹಾಭಾರತ ಮಹಾಕಾವ್ಯಗಳಲ್ಲಿ ಕಂಡುಬರುವ ಸ್ತ್ರೀ ಪಾತ್ರಗಳನ್ನು ಗಮನಿಸಿದಾಗ ಹೆಣ್ಣಿನ ತಲ್ಲಣ ಮನದಟ್ಟಾಗುತ್ತದೆ. ತುಂಬು ಗರ್ಭಿಣಿ ಸೀತೆ ಕಾಡಿನಲ್ಲಿ ಒಂಟಿಯಾಗಿ ಅಲೆದಾಡಿದ್ದು, ಮಕ್ಕಳನ್ನು ಏಕ ಪೋಷಕಿಯಾಗಿ ಬೆಳೆಸಿದ ರೀತಿ, ಗಂಡನಿಗಾಗಿ ಗಾಂಧಾರಿ ಕುರುಡಿಯಾಗುವುದು, ಕುಂತಿ ಏಕ ಪೋಷಕಿಯಾಗಿ, ದ್ರೌಪದಿ ಪಾಂಚಾಲಿಯಾಗಿ ಹಂಚಿಕೆಯಾಗುವುದುಇವೆಲ್ಲವು ತಲ್ಲಣಗಳೇ. ಆದರೆ ಇಂದು ಆಧುನಿಕ ಕಾಲದಲ್ಲಿದ್ದೇವೆ. ಕಥೆಯ–ಕಾವ್ಯದ ಬಾಕಿ ಪಾತ್ರಗಳು ಇದೇ ಮಾದರಿಯಲ್ಲಿಯೆ ಅನೇಕವಾಗಿವೆ. ಈ ಎಲ್ಲ ಪಾತ್ರಗಳು ಮಹಿಳಾ ಕುಲಕ್ಕೆ ಪ್ರೇರಣೆ ಮತ್ತು ಅಂತಃ ಶಕ್ತಿಯಾಗಿವೆ.

ಮದ್ಯಮ ವರ್ಗವನ್ನು ಪ್ರತಿನಿಧಿಸುವ ಮಹಿಳಾ ಧ್ವನಿಗಳು ಇಡೀ ಮಹಿಳಾ ಸಮೂಹವನ್ನು ಅಕಾಡೆಮಿಕ್ ಶಿಸ್ತಿನಲ್ಲಿ ಗ್ರಹಿಸಿನೋಡದೇ,ಅಸಂಘಟಿತ ವಲಯದ ಕೂಲಿಕಾರರು, ಕಾರ್ಮಿಕರು, ರೈತಾಪಿ ಮಹಿಳೆಯರ ತಲ್ಲಣಗಳಿಗೆಸ್ಪಂದಿಸುವಂತಿರಬೇಕು. ಸೀಮಿತತೆಯಲ್ಲಿ ಸಾಹಿತಿಗಳು, ಕಲಾವಿದರು, ನಟಿಯರು, ಉನ್ನತ ಮಹಿಳಾ ಉದ್ಯೋಗಿಗಳ ಪರವಾಗಿ ಧ್ವನಿಯೆತ್ತುತ್ತಾ, ಹೇಳುವ ಪರಿಪಾಠ ಕಡಿಮೆಯಾಗಬೇಕು. ಇವುಗಳ ಕುರಿತು ಉನ್ನತ ಹಂತದಲ್ಲಿ ನಡೆಯುವ ವಿಚಾರ ಸಂಕಿರಣಗಳಂತಹ ಶಿಸ್ತಿನಲ್ಲಿ ಮದ್ಯಮ ವರ್ಗದ ಮಹಿಳೆಯರ ತಲ್ಲಣಗಳಿಗೆ ಸ್ಪಂದನೆಯಿರಬೇಕು.

ಈ ಎಲ್ಲ ಸವಾಲುಗಳನ್ನು ತಲ್ಲಣಗಳನ್ನು ಎದುರಿಸಲು ಇನ್ನಷ್ಟು ಕಟ್ಟುನಿಟ್ಟಾದ ಕಾನೂನಿನ ಕ್ರಮಗಳು ಬೇಕು. ಅವಳಲ್ಲಿ ಆತ್ಮವಿಶ್ವಾಸ ತುಂಬಲು ನೈತಿಕ ಸ್ಥೈರ್ಯ ಮೂಡಿಸಲು ವ್ಯಕ್ತಿತ್ವವಿಕಸನ ತರಬೇತಿಯ ಅವಶ್ಯಕತೆಯಿದೆ. ಸ್ವಯಂ ರಕ್ಷಣೆ ಮಾಡಿಕೊಳ್ಳುವುದನ್ನು ಅರಿಯಬೇಕು.ಈ ಹಿನ್ನೆಲೆಯಲ್ಲಿ ಹೆಣ್ಣು ಎಂದರೆ ಕೇವಲ ಸೌಂದರ್ಯದ ಪರಿಭಾಷೆಯಾಗಿ ಭಾವನಾ ಜೀವಿಯಾಗಿ ಶೀಲವಂತಿಕೆಯಿಂದ ಮಾತ್ರ ಗ್ರಹಿಸದೆ ಅವಳ ಬೌದ್ಧಿಕ ಮಟ್ಟದಿಂದ ನೋಡುವ ಧೋರಣೆ ಬರಬೇಕು.

ಕೊನೆಯದಾಗಿ ಚಂಪಾ ಅವರ "ಹೂ ಹೆಣ್ಣು ತಾರೆ" ಕವನ ಸಂಕಲನದ ಕವಿತೆಯೊಂದು ನೆನಪಾಗುತ್ತದೆ.

"ಜೀವನದಿಯಾಗಿ ಹರಿದವಳು ಹೆಣ್ಣು,
ಅಡಿಯಲ್ಲೂ ಮುಡಿಯಲ್ಲೂ
ಮೆರೆದು ಮಣ್ಣಿಗೆ ಉದುರಿ ಮಣ್ಣಾದರೂ
ನೂರು ಹೂವಿಗೆ ಬೀಜವಾದವಳು ಹೆಣ್ಣು
ನಮ್ಮ ಹಾಡಿಗೆ ಮೂಡಿಸುವವಳು ಕಣ್ಣು."

ಹೀಗೆ ಹೆಣ್ಣಿನ ಉದಾತ್ತ ಬದುಕು ಮತ್ತು ಜೀವ ಸಂಕುಲದ ಸೃಜನ ಶೀಲತೆ, ಚಲನಶೀಲತೆಗೆ ಕಾರಣಳಾಗುತ್ತದೆ. ಈ ಎಲ್ಲ ತಲ್ಲಣಗಳ ಮಧ್ಯೆಯೇ ಅನೇಕ ಮಹಿಳಾ ಸಾಹಿತಿಗಳು, ಕಲಾವಿದರು ವಿಜ್ಞಾನಿಗಳು, ಆಕಾಶದ ಅಂಗಳದಲ್ಲಿ ಧ್ವಜವನ್ನು ಹಾರಿಸಿದ್ದಾರೆ. ಈ ನೆಲೆಯಲ್ಲಿ ಹೆಣ್ಣು ಕುಟುಂಬದ ಕಣ್ಣು, ಅಷ್ಟೇ ಅಲ್ಲ ಅವಳೊಂದು ದಿವ್ಯ ಶಕ್ತಿ, ಅದಮ್ಯ ಚೇತನ, ಬತ್ತಲಾರದ ಗಂಗೆಯಾಗಿಯೇ ಪ್ರವಹಿಸುತ್ತಿರುತ್ತಾಳೆ.

**ಪರಾಮರ್ಶನ ಗ್ರಂಥಗಳು**


1. ಮಹಿಳೆಯರ ಸ್ಥಿತಿಗತಿಗಳು: ಲೇಖನ – ಡಾ. ದೇಜಗೌ
2. ಮಹಿಳಾ ಅಧ್ಯಯನ: ಲೇಖನ – ಸಂಪುಟ–೨, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ
3. ಬಿಡುಗಡೆಯ ಕವನಗಳು: ಕೆ. ಶರೀಫಾ
4. ಹೆಣ್ಣು ವರ್ತಮಾನದ ತಲ್ಲಣಗಳು: ಲೇಖನ – ಡಾ. ವಿನಯಾ ನಾಯಕ